# ನನ್ನೂರೇ ನನ್ನ ರೂಪಕ ಲೋಕ

## ಇಟಲಿ ನಾಟಕಕಾರ
## ದಾರಿಯೋ ಫೋ
## ಆತ್ಮಕತೆಯ ಆಯ್ದ ಭಾಗಗಳು

**ಕನ್ನಡಕ್ಕೆ: ಎಸ್. ಗಂಗಾಧರಯ್ಯ**

### ಪ್ರವೇಶಕ್ಕೂ ಮುನ್ನ

"ರಂಗಭೂಮಿ, ಸಾಹಿತ್ಯ ಹಾಗೂ ಕಲಾ ಅಭಿವ್ಯಕ್ತಿಗಳು ತನ್ನ ಕಾಲದ ವಾಸ್ತವವನ್ನು ಮಾತನಾಡದೇ ಹೋದರೆ, ಅದಕ್ಕೆ ಮುಖಾಮುಖಿಯಾಗದೇ ಹೋದರೆ ಅವುಗಳಿಗೆ ಯಾವ ಕಿಮ್ಮತ್ತೂ ಇರುವುದಿಲ್ಲ.'' 1997ರಲ್ಲಿ ನೊಬೆಲ್ ಬಹುಮಾನವನ್ನು ಪಡೆಯುವ ಸಂದರ್ಭದಲ್ಲಿ ದಾರಿಯೋ ಫೋ ಹೇಳಿದ್ದ ಮಾತುಗಳಿವು. ದಾರಿಯೋ ಫೋ ಇಟಲಿಯ ಹಾಗೂ ವಿಶ್ವದ ಶ್ರೇಷ್ಠ ನಾಟಕಕಾರರಲ್ಲಿ ಒಬ್ಬ. ಅವನು ಕೇವಲ ನಾಟಕಕಾರ ಮಾತ್ರ ಆಗಿರದೆ, ನಟ, ಹಾಡುಗಾರ, ನಿರ್ದೇಶಕ, ಹೋರಾಟಗಾರ ಕೂಡಾ ಆಗಿದ್ದ. ಎಡಪಂಥೀಯ ಆಲೋಚನೆಗಳಿಂದ ಪ್ರಭಾವಿತನಾಗಿದ್ದ ಫೋ, ತುಳಿತಕ್ಕೊಳಗಾದವರ ಘನತೆಯನ್ನು ಎತ್ತಿ ಹಿಡಿಯುವಲ್ಲಿ ಅಂತೆಯೇ ಅನ್ಯಾಯಗಳಿಗೆ ಜನರ ಕಣ್ತೆರೆಸುವ ಕೆಲಸವನ್ನು ತನ್ನ ಬರಹ ಹಾಗೂ ಬದುಕಿನಲ್ಲಿ ಮಾಡಿದವನು. ತನ್ನ ವಿಡಂಬನಾತ್ಮಕ ಶೈಲಿಯಲ್ಲಿ, ರಾಜಕೀಯ ನಾಯಕರನ್ನು ತೀವ್ರ ತಮಾಷೆ ಮಾಡುವುದರ ಮೂಲಕ ಸರ್ಕಾರ ಹಾಗೂ ವ್ಯವಸ್ಥೆಯ ಕೋಪಕ್ಕೆ ಗುರಿಯಾಗಿದ್ದವನು. ಕೈದಿಗಳನ್ನು ಬೆಂಬಲಿಸುವ ಸಂಘಟನೆಯಾಗಿದ್ದ 'ಸೊಕೊರ್ಸೊ ರೊಸ್ಸೋ' ಎಂಬ ಸಂಘಟನೆಯ ಸದಸ್ಯತ್ವ ಪಡೆದ ಎಂಬ ಕಾರಣಕ್ಕೆ ಅಮೆರಿಕ ಫೋಗೆ ವೀಸಾ ನಿರಾಕರಿಸಿತ್ತು.

ಸ್ಥಳೀಯ ಉಪ ಭಾಷೆ ಹಾಗೂ ನುಡಿಗಟ್ಟುಗಳನ್ನು ನುಡಿಸುತ್ತಾ, ತನ್ನ ನಾಟಕ ಮತ್ತು ಬರಹಗಳನ್ನು ಜನರ ಎದೆಗೆ ಹತ್ತಿರವಾಗಿಸಿದವನು. ಆ ಮೂಲಕ ಸರ್ಕಾರ ಮತ್ತು ವ್ಯವಸ್ಥೆಯ ಲೋಪದೋಷಗಳನ್ನು, ಅಕ್ರಮ ಅನ್ಯಾಯಗಳನ್ನು ಜನರೆದುರು ಬೆತ್ತಲಾಗಿಸಿದವನು. ನೋವನ್ನೂ ಮಾನವನ ಚೇತನವನ್ನಾಗಿ ಪರಿವರ್ತಿಸಬಲ್ಲಂಥ ಅಸಾಧಾರಣ ಸಾಮರ್ಥ್ಯ ಫೋಗಿತ್ತು. ಈ ಕಾರಣಕ್ಕೇ ಹೆಂಡತಿ ಫ್ರ್ಯಾಂಕ್ ರೇಮ್‌ನೊಂದಿಗೆ ಸ್ವಂತ ರಂಗಭೂಮಿಯೊಂದನ್ನು ಕಟ್ಟಿಕೊಂಡು